www.coefpo.org



## ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರ
(ಕರ್ನಾಟಕ ಸರ್ಕಾರದ ನೋಂದಾಯಿತ ಸಂಸ್ಥೆ)
ತೋಟಗಾರಿಕೆ ಇಲಾಖೆ
ಹಾಗೂ
ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟೆ





# ರೈತ ಉತ್ಪಾದಕ ಸಂಸ್ಥೆಗಳ ಕಾನೂನು ಅನುಸರಣೆಗೆ ಸಂಬಂಧಪಟ್ಟ ಮೇಲಿಂದ ಮೇಲೆ ಕೇಳಲಾಗುವ ಪ್ರಶ್ನೋತ್ತರಗಳ ಕೈಪಿಡಿ

ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರದ ಪ್ರಕಟಣೆಗಳು – 04

ಜಿ. ಬಸವರಾಜ್
ಎಂ. ಮಂಜುನಾಥ
ಬಿ.ಎಸ್. ಶ್ವೇತಾ
ಶಶಿಭೂಷಣ ಎ. ಘಟ್ನಟ್ಟಿ
ಅಶೋಕ ಎಸ್. ಆಲೂರ
ಪರಮೇಶ್ವರ್ ಜಿ. ಭಟ್

ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರ
ಬೆಂಗಳೂರು

# ಕಾನೂನು ಅನುಸರಣೆಗಳ ಮೇಲೆ ಪ್ರಶ್ನೋತ್ತರ ಕೈಪಿಡಿ

**1. ಪಾವತಿಸಿದ ಬಂಡವಾಳ (Paid-up Capital) ಮತ್ತು ಅಧಿಕೃತ ಬಂಡವಾಳವನ್ನು (Authorised Capital) ಹೆಚ್ಚಿಸಲು ಅವಕಾಶವಿದೆಯೆ?**

ಉ. ಹೌದು, ರೈತ ಉತ್ಪಾದಕ ಕಂಪನಿಯ ನೀತಿ ನಿಯಮಾವಳಿ (ಎಓಎ) ಮತ್ತು ನಿಯಮಾವಳಿಗಳ ಜ್ಞಾಪನಾ ಪತ್ರ (ಎಮ್‌ಓಎ) ಗಳಲ್ಲಿ ತಿದ್ದುಪಡಿ ಮಾಡಿ ವಾರ್ಷಿಕ ಸಾಮಾನ್ಯ ಸಭೆಯಲ್ಲಿ 1/3 ರಷ್ಟು ಸದಸ್ಯರ ಅನುಮೋದನೆ ಪಡೆದ ನಂತರ ಕಂಪನಿ ನಿಬಂಧಕರಿಗೆ ಸಲ್ಲಿಸುವ ಮುಖಾಂತರ ಪಾವತಿಸಿದ ಬಂಡವಾಳ ಮತ್ತು ಅಧಿಕೃತ ಬಂಡವಾಳವನ್ನು ಹೆಚ್ಚಿಸಬಹುದು.

**2. ಸದಸ್ಯರ ಸಂಖ್ಯೆಯನ್ನು ಹೆಚ್ಚಿಸಲು ಸಾಧ್ಯವೇ?**

ಉ. ಅಧಿಕೃತ ಬಂಡವಾಳದ ಮಿತಿಯನ್ನು ಪರಿಶೀಲಿಸಿ, ಮಿತಿಯು ಮೀರುವಂತಿದ್ದರೆ, ನೀತಿ ನಿಯಮಾವಳಿ ಮತ್ತು ಜ್ಞಾಪನಾ ಪತ್ರಗಳಲ್ಲಿ ತಿದ್ದುಪಡಿ ಮಾಡಿ ಕಂಪನಿ ನಿಬಂಧಕರಿಗೆ ಸಲ್ಲಿಸಿ ನಂತರ ಹೊಸ ಸದಸ್ಯರ ಸೇರ್ಪಡೆಯನ್ನು ಮಾಡಬಹುದು.

- ಅಧಿಕೃತ ಬಂಡವಾಳದ ಮಿತಿಯನ್ನು ನೀತಿ ನಿಯಮಾವಳಿಯಲ್ಲಿ ಪರಿಶೀಲಿಸುವುದು.
- ಆಡಳಿತ ಮಂಡಳಿಯ ಸಭೆ ಕರೆದು ಅನುಮೋದನೆ ಪಡೆಯುವುದು.
- ವಿಶೇಷ ಸಾಮಾನ್ಯ ಸಭೆ (ಸದಸ್ಯರು) ಕರೆದು ಅನುಮೋದನೆ ಪಡೆಯುವುದು.
- ನಮೂನೆ ಎಸ್‌ಎಚ್ 7 ರಲ್ಲಿ ವಿವರಗಳನ್ನು ಭರ್ತಿಮಾಡಿ ಸಾಮಾನ್ಯ ಸಭೆ ನಡೆದ 30 ದಿನಗಳೊಳಗೆ ಸಂಬಂಧಪಟ್ಟ ದಾಖಲಾತಿಗಳೊಂದಿಗೆ ಕಂಪನಿ ನಿಬಂಧಕರಿಗೆ ಸಲ್ಲಿಸುವುದು.

**3. ಯಾವ ಆಧಾರದ ಮೇಲೆ ಸದಸ್ಯರಿಗೆ ಪ್ರೋತ್ಸಾಹ ಬೋನಸ್ ನೀಡಲಾಗುತ್ತದೆ? ರೈತ ಉತ್ಪಾದಕ ಸಂಸ್ಥೆಯ ಎಲ್ಲಾ ಸದಸ್ಯರಿಗೂ ಪ್ರೋತ್ಸಾಹ ಬೋನಸ್ ನೀಡಲಾಗುತ್ತದೆಯೇ?**

ಉ. ರೈತ ಉತ್ಪಾದಕರ ಕಂಪನಿ ವ್ಯವಹಾರದಲ್ಲಿ ಸಕ್ರೀಯವಾಗಿ ಭಾಗವಹಿಸಿದ (ಪರಿಕರಗಳ ಖರೀದಿ ಮತ್ತು ಉತ್ಪನ್ನಗಳ ಮಾರಾಟ) ಸದಸ್ಯರ ವ್ಯವಹಾರದ ಒಟ್ಟು ಆಧಾರದ ಮೇಲೆ ಪ್ರತಿಶತ ಪ್ರೋತ್ಸಾಹದ ಲಾಭಾಂಶವನ್ನು ಪರಿಗಣಿಸಲಾಗುವುದು. ಇದನ್ನು ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಅನುಮೋದನೆ ಪಡೆದು ಸಕ್ರೀಯ ಸದಸ್ಯರಿಗೆ ವಿತರಿಸಲಾಗುವುದು.

**4. ವಾರ್ಷಿಕ ಸಾಮಾನ್ಯ ಸಭೆ ನಡೆಸುವಾಗ ಎಷ್ಟು ಸದಸ್ಯರಿರಬೇಕು?**

ಉ. ಒಟ್ಟು ಸದಸ್ಯರ 1/4 ಭಾಗದಷ್ಟು ಸದಸ್ಯರು ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಹಾಜರಿರಬೇಕು.
ಉದಾಹರಣೆಗೆ ಒಟ್ಟು ಸದಸ್ಯರು 1,000 ಇದ್ದರೆ ಕನಿಷ್ಠ 250 ಸದಸ್ಯರು ಹಾಜರಿರಬೇಕು.

**5. ನಿರ್ದೇಶಕರ ಮಂಡಳಿಯ ಆಯ್ಕೆ / ಚುನಾವಣೆ ಪ್ರಕ್ರಿಯೆಯಲ್ಲಿ ಯಾವುದಾದರೂ ಮೀಸಲಾತಿ ಇದೆಯೇ?**

ಉ. ಕಂಪನಿ ಕಾಯ್ದೆ ಅಡಿಯಲ್ಲಿ ಆಡಳಿತ ಮಂಡಳಿಯ ಸದಸ್ಯರು/ ನಿರ್ದೇಶಕರಾಗಲು ಯಾವುದೇ ಮೀಸಲಾತಿ ಇರುವುದಿಲ್ಲ.

**6. ಮುಖ್ಯ ಕಾರ್ಯನಿರ್ವಹಣಾಧಿಕಾರಿ ಮತ್ತು ಆಡಳಿತ ಮಂಡಳಿ ಸದಸ್ಯರು ಬೇರೆ ಯಾವುದೇ ಕಂಪನಿಯಲ್ಲಿ ವ್ಯವಹಾರ ವಹಿವಾಟು ನಡೆಸುತ್ತಿದ್ದರೆ ಅವರು ಕಂಪನಿಗೆ (ರೈತ ಉತ್ಪಾದಕ ಸಂಸ್ಥೆ) ಅದನ್ನು ಘೋಷಿಸಬೇಕೆ?**

ಉ. ನಿರ್ದೇಶಕರು ಮತ್ತು ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಬೇರೆ ಯಾವುದೇ ಕಂಪನಿಯಲ್ಲಿ ಪ್ರಮುಖ ಹುದ್ದೆಗಳನ್ನು ನಿರ್ವಹಿಸುತ್ತಿದ್ದರೆ ಮತ್ತು ಬೇರೆ ಸಂಸ್ಥೆಗಳಲ್ಲಿ ಪಾಲುದಾರಿಕೆಯನ್ನು ಹೊಂದಿದ್ದರೆ, ಸಂಬಂಧಪಟ್ಟ ಮಾಹಿತಿಯನ್ನು ರೈತ ಉತ್ಪಾದಕ ಸಂಸ್ಥೆಗೆ ನೀಡಬೇಕಾಗುತ್ತದೆ.

**7. ಲೆಕ್ಕ ಪರಿಶೋಧಕ ಮಾನದಂಡಗಳನ್ನು ಬದಲಾಯಿಸಬಹುದೇ?**

ಉ. ಲೆಕ್ಕ ಪರಿಶೋಧಕ ಮಾನದಂಡಗಳು ಕಂಪನಿಗಳ ಕಾಯ್ದೆ 2013ಕ್ಕೆ ಅನುಸಾರವಾಗಿರಬೇಕು, ಇದನ್ನು ಯಾವುದೇ ಕಾರಣಕ್ಕೂ ಬದಲಾಯಿಸಲು ಬರುವುದಿಲ್ಲ.

**8. ಮುಖ್ಯ ಕಾರ್ಯನಿರ್ವಹಣಾಧಿಕಾರಿ ಹೆಸರಿನಲ್ಲಿ ಮಾಸಿಕ ಖರ್ಚುಗಳಿಗೆ ಮತ್ತು ಇತರ ಖರ್ಚುಗಳಿಗೆ ಹಣ/ನಗದನ್ನು ಬ್ಯಾಂಕಿನಿಂದ ತೆಗೆಯಬಹುದೇ?**

ಉ. ದಿನನಿತ್ಯದ ಅಗತ್ಯಕ್ಕೆ ತಕ್ಕಂತೆ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ನಗದನ್ನು ನೀತಿ ನಿಯಮಾವಳಿಗಳಲ್ಲಿ ತಿಳಿಸಿದ ಮಿತಿಯೊಳಗೆ ಇಟ್ಟುಕೊಳ್ಳಬಹುದು. ಆದರೆ ನಗದನ್ನು ಬ್ಯಾಂಕಿನಿಂದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಅಥವಾ

ನಿರ್ದೇಶಕರ ಹೆಸರಿನಲ್ಲಿ ತೆಗೆಯುವಂತಿಲ್ಲ, ಯಾವುದೇ ಮೊತ್ತವನ್ನು ಬ್ಯಾಂಕಿನಿಂದ ತೆಗೆಯಬೇಕಾದರೆ ಚೆಕ್‌ಗೆ ಜಂಟಿ ಸಹಿ ಮಾಡಿ ತೆಗೆಯಬಹುದು.

**9. ಒಂದು ವರ್ಷಕ್ಕೆ ಎಷ್ಟು ವಾರ್ಷಿಕ ಸಾಮಾನ್ಯ ಸಭೆ (ಎಜಿಎಮ್) ಗಳನ್ನು ನಡೆಸಬಹುದು?**

ಉ. ಕಂಪನಿಯ ಕಾಯ್ದೆ ಪ್ರಕಾರ ವರ್ಷಕ್ಕೆ ಒಂದು ಸಾಮಾನ್ಯ ಸಭೆಯನ್ನು ನಡೆಸುವುದು ಕಡ್ಡಾಯ. ಒಂದು ಸಭೆಯಿಂದ ಮತ್ತೊಂದು ಸಭೆಗೆ 15 ತಿಂಗಳಿಗಿಂತ ಹೆಚ್ಚಿನ ಅಂತರವಿರುವಂತಿಲ್ಲ. ಹಣಕಾಸು ವರ್ಷ ಮುಗಿದ 6 ತಿಂಗಳೊಳಗೆ (ಸೆಪ್ಟೆಂಬರ್ 30 ರೊಳಗೆ) ಸಾಮಾನ್ಯ ಸಭೆಯನ್ನು ನಡೆಸಬೇಕು. ಸಭೆಯನ್ನು ನಡೆಸಿದ 60 ದಿನಗಳೊಳಗೆ ಸಂಬಂಧಪಟ್ಟ ಎಲ್ಲಾ ದಾಖಲಾತಿಗಳೊಂದಿಗೆ ಕಂಪನಿ ನಿಬಂಧಕರಿಗೆ ವಿವರಗಳನ್ನು ಸಲ್ಲಿಸುವುದು ಕಡ್ಡಾಯವಾಗಿರುತ್ತದೆ.

**10. ಮಂಡಳಿಯ ಸಭೆಯಲ್ಲಿ ಗೈರು ಹಾಜರಾದ ಸದಸ್ಯರಿಗೆ ಸಭೆಯ ನಡಾವಳಿಯನ್ನು ಮಾರ್ಪಡಿಸುವ ಅಧಿಕಾರವಿದೆಯೇ?**

ಉ. ಮಂಡಳಿಯ ಸಭೆಗೆ ಗೈರು ಹಾಜರಾದ ಸದಸ್ಯರಿಗೆ ನಿರ್ಧಾರಗಳ ಬಗ್ಗೆ ಪೂರ್ಣ ಮಾಹಿತಿ ಇಲ್ಲದಿರುವುದರಿಂದ ಕಂಪನಿ ಕಾಯ್ದೆ ಅಡಿಯಲ್ಲಿ ಅವರಿಗೆ ನಡಾವಳಿಯನ್ನು ಬದಲಾಯಿಸುವ ಅಧಿಕಾರವಿರುವುದಿಲ್ಲ.

**11. ಕಾರಣಾಂತರಗಳಿಂದ ಸಭೆ ಮುಂದೂಡಿದಾಗ ಸಭೆ ಸೂಚನಾ ಪತ್ರವನ್ನು ಕಳುಹಿಸಬೇಕೆ?**

ಉ. ಸಭೆ ಸೂಚನಾ ಪತ್ರವನ್ನು ಸಭೆ ಮುಂದೂಡಿದ ದಿನ ಮತ್ತು ಸಮಯ ನಮೂದಿಸಿ ಕೊಡಬೇಕು.

**12. ತಜ್ಞ ನಿರ್ದೇಶಕರು ನಿಗದಿತ 15 ಆಡಳಿತ ಮಂಡಳಿಯ ನಿರ್ದೇಶಕರ ಭಾಗವಾಗಬಹುದೇ?**

ಉ. ಆಗಬಹುದು, ಆದರೆ ಅವರಿಗೆ ಪ್ರತ್ಯೇಕ ಡಿಆಯ್‌ಎನ್ ಮತ್ತು ಡಿಎಸ್‌ಇ ಇರಬೇಕು, ಇಲ್ಲದಿದ್ದಲ್ಲಿ ಇವುಗಳನ್ನು ಮಾಡಿಸತಕ್ಕದ್ದು. ಆಯ್ಕೆ ಮಾಡಿದ ತಜ್ಞ ನಿರ್ದೇಶಕರು ಒಟ್ಟು ನಿರ್ದೇಶಕರ 1/5 ರಷ್ಟು ಮೀರಬಾರದು.

**13. ತಜ್ಞ ನಿರ್ದೇಶಕರಿಗೆ ಮತದಾನದ ಹಕ್ಕು ಇರುತ್ತದೆಯೇ?**

ಉ. ತಜ್ಞನಿರ್ದೇಶಕರಿಗೆ ಮತದಾನದ ಹಕ್ಕು ಇರುವುದಿಲ್ಲ, ಆದರೆ ಅವರಿಗೆ ಕಂಪನಿ ಕಾಯ್ದೆ ಪ್ರಕಾರ ಅಧ್ಯಕ್ಷರಾಗುವ ಹಕ್ಕನ್ನು ಹೊಂದಿರುತ್ತಾರೆ.

**14. ತಜ್ಞ ನಿರ್ದೇಶಕರನ್ನು ಆಡಳಿತ ಮಂಡಳಿ ಸಭೆಗೆ ಆಹ್ವಾನಿಸಬಹುದೇ?**

ಉ. ತಜ್ಞನಿರ್ದೇಶಕರನ್ನು ಮಾಸಿಕ ಸಭೆಗೆ ಆಹ್ವಾನಿಸಬಹುದು, ಆದರೆ ಅವರನ್ನು ಆಹ್ವಾನಿತರೆಂದೇ ಪರಿಗಣಿಸಲಾಗುವುದು.

**15. ನಾಲ್ಕಕ್ಕಿಂತ ಹೆಚ್ಚು ಮಂಡಳಿ ಸಭೆಯನ್ನು ನಡೆಸಬಹುದೇ?**

ಉ. ನಡೆಸಬಹುದು, ಆದರೆ ಕಂಪನಿಯ ನಿಯಮಾವಳಿಯಲ್ಲಿ ಬರೆದಿರುವಂತೆ ಆಡಳಿತ ಮಂಡಳಿಯ ಸಭೆಯನ್ನು ಕಾಲಕಾಲಕ್ಕೆ ನಡೆಸಬಹುದು, ಮುಖ್ಯವಾಗಿ ಒಂದು ವರ್ಷದಲ್ಲಿ 4 ಆಡಳಿತ ಮಂಡಳಿಯ ಸಭೆಗಳನ್ನು ನಡೆಸಬೇಕು.

**16. ರೈತ ಉತ್ಪಾದಕ ಸಂಸ್ಥೆಗಳ ಸದಸ್ಯರಿಗೆ ಸಾಲ ಕೊಡಬಹುದೇ?**

ಉ. ಕೊಡಬಹುದು, ಆದಾಗ್ಯೂ ಸಾಲವನ್ನು ವ್ಯವಹಾರ ಸಂಭಂದಿತ ಕಾರ್ಯಗಳಿಗೆ ನೀಡುವುದು ಹಾಗೂ ಸಾಲಗಾರರೊಂದಿಗಿನ ಒಪ್ಪಂದದ ಜೊತೆಗೆ ವಿತರಿಸಲಾದ ಸಾಲದ ವಿರುದ್ಧ ಜಾಮೀನನ್ನು ತೆಗೆದುಕೊಳ್ಳುವುದು ಸುರಕ್ಷಿತವಾಗಿರುತ್ತದೆ. ಆದರೆ, ಸಾಲ ನೀಡಲು ಆಡಳಿತ ಮಂಡಳಿಯ ಮತ್ತು ಸಾಮಾನ್ಯ ಸಭೆಗಳ ಒಪ್ಪಿಗೆ ಪಡೆಯುವುದು ಕಡ್ಡಾಯವಾಗಿರುತ್ತದೆ.

**17. ನಿರ್ದೇಶಕರ ಮಂಡಳಿಗೆ ಕನಿಷ್ಟ ಮತ್ತು ಗರಿಷ್ಟ ಅವಧಿ ಎಷ್ಟು?**

ಉ. ಆಡಳಿತ ಮಂಡಳಿಯ ಕನಿಷ್ಟ ಅವಧಿ ಒಂದು ವರ್ಷ ಮತ್ತು ಗರಿಷ್ಟ ಅವಧಿ 5 ವರ್ಷಗಳಾಗಿರುತ್ತದೆ. ಕನಿಷ್ಟ ಮತ್ತು ಗರಿಷ್ಠ ಅವಧಿಯನ್ನು ಬದಲಾವಣೆ ಮಾಡುವಂತಿಲ್ಲ.

**18. ರೈತ ಉತ್ಪಾದಕ ಸಂಸ್ಥೆಯ ಪಾಲುದಾರರು ನಾಮ ನಿರ್ದೇಶಿಸಿದ ವ್ಯಕ್ತಿಗಳ (ನಾಮಿನಿ) ವಿವರಗಳನ್ನು ಕಂಪನಿಗೆ ಕಡ್ಡಾಯವಾಗಿ ಸಲ್ಲಿಸಬೇಕೆ? ಹಾಗೂ ಅವರನ್ನು ನೇಮಕ ಮಾಡುವುದು ಕಡ್ಡಾಯವಾಗಿರುತ್ತದೆಯೆ?**

ಉ. ಹೌದು, ಷೇರುದಾರರಾದ ದಿನಾಂಕದಿಂದ 90 ದಿನಗಳೊಳಗೆ ಕಡ್ಡಾಯವಾಗಿ ತಮ್ಮ ನಾಮ ನಿರ್ದೇಶಿಸಿದ ವ್ಯಕ್ತಿ ಮತ್ತು ಅವರ ವಿವರಗಳನ್ನು ಕಂಪನಿಗೆ ಸಲ್ಲಿಸಬೇಕು.

**19. ರೈತ ಉತ್ಪಾದಕ ಸಂಸ್ಥೆಯಿಂದ ಶಾಸನಬದ್ಧ ಲೆಕ್ಕಪರಿಶೋಧಕರನ್ನು ಕಡ್ಡಾಯವಾಗಿ ನೇಮಕ ಮಾಡಬೇಕೆ?**

ಉ. ಹೌದು, ರೈತ ಉತ್ಪಾದಕ ಸಂಸ್ಥೆಗಳು ಲೆಕ್ಕ ಪರಿಶೋಧಕರನ್ನು 5 ವರ್ಷಗಳ ಗರಿಷ್ಟ ಅವಧಿಗೆ ನೇಮಕ ಮಾಡುವುದು ಕಡ್ಡಾಯವಾಗಿದೆ. ಆದರೆ, ಇವರ ನೇಮಕವನ್ನು ಪ್ರತಿ ಸಾಮಾನ್ಯ ಸಭೆಯಲ್ಲಿ ಅನುಮೋದಿಸಬೇಕು. ಸಂಧಿಗ್ಧ ಪರಿಸ್ಥಿತಿಯಲ್ಲಿ/ ಹೊಂದಾಣಿಕೆಯಾಗದಿದ್ದಲ್ಲಿ ಸೂಕ್ತ ಕಾರಣದೊಂದಿಗೆ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಮಂಡಿಸಿ, ಅನುಮೋದನೆ ಪಡೆದು, ಕಂಪನಿ ನಿಬಂಧಕರಿಗೆ ಸಂಬಂಧಪಟ್ಟ ನಮೂನೆಯಲ್ಲಿ ಲೆಕ್ಕಪರಿಶೋಧಕರ ಬದಲಾವಣೆಗೆ ವಿವರಗಳನ್ನು ಸಲ್ಲಿಸಿ ಬದಲಾವಣೆ ಮಾಡಬಹುದು.

**20. ರೈತ ಉತ್ಪಾದಕ ಸಂಸ್ಥೆಗಳಲ್ಲಿ ಸಾಮಾನ್ಯ ಬಂಡವಾಳವನ್ನು ಮೀಸಲಿಡುವುದು ಕಡ್ಡಾಯವೆ?**

ಉ. ಹೌದು, ಪ್ರತಿ ರೈತ ಉತ್ಪಾದಕ ಕಂಪನಿಯು ಪ್ರತಿ ವರ್ಷದಲ್ಲಿ ಸಾಮಾನ್ಯ ಮೀಸಲು ಬಂಡವಾಳವನ್ನು ಕಂಪನಿ ಕಾಯ್ದೆ ವಿಭಾಗ 581 ಝೆಡ್ಆಯ್ ರಲ್ಲಿ ತಿಳಿಸಿರುವಂತೆ ಕಾಯ್ದಿರಿಸುವುದು ಕಡ್ಡಾಯವಾಗಿರುತ್ತದೆ. ಆದರೆ, ಕಂಪನಿ ನಿಯಮಾವಳಿಗಳಲ್ಲಿ ತಿಳಿಸಿರುವಂತೆ ಆದಾಯದ ಶೇಕಡಾವಾರು ಮೊತ್ತವನ್ನು ಸಾಮಾನ್ಯ ಮೀಸಲು ಬಂಡವಾಳವಾಗಿ ಮೀಸಲಿಡಬೇಕು.

**21. ಷೇರು ಹಣವನ್ನು ಬ್ಯಾಂಕಿನಲ್ಲಿ ಸ್ಥಿರ ಠೇವಣಿಯಾಗಿ ಇಡಬಹುದೆ?**

ಉ. ಹೌದು, ಆಡಳಿತ ಮಂಡಳಿಯ ಸಭೆಯಲ್ಲಿ ನಿರ್ಧರಿಸಿದಂತೆ ಷೇರು ಬಂಡವಾಳವನ್ನು ಬ್ಯಾಂಕಿನಲ್ಲಿ ಸ್ಥಿರ ಠೇವಣಿಯಾಗಿ ಇಡಬಹುದು, ಯಾವುದೇ ಕಾರಣಕ್ಕು ಷೇರು ಬಂಡವಾಳವನ್ನು ಕಂಪನಿಯ ಸ್ಥಿರಾಸ್ತಿಗಳನ್ನು ಖರೀದಿಸಲು ಅಥವಾ ಸಿಬ್ಬಂದಿಯ ಸಂಬಳಕ್ಕಾಗಲಿ ಬಳಸುವಂತಿಲ್ಲ. ಆದರೆ ಷೇರು ಬಂಡವಾಳವನ್ನು, ಮಂಡಳಿಯ ಅನುಮತಿಯನ್ನು ಪಡೆದು ಆದಾಯ ತರುವಂತಹ ವ್ಯವಹಾರಕ್ಕೆ ಬಳಸುವುದು ಸೂಕ್ತ.

**22. ನಿರ್ದೇಶಕ ಮಂಡಳಿ ಸದಸ್ಯರು ಸತತವಾಗಿ ನಾಲ್ಕು ಬಾರಿ ಮಂಡಳಿಯ ಸಭೆಗೆ ಹಾಜರಾಗಿಲ್ಲವೆಂದರೆ ಏನಾಗುತ್ತದೆ?**

ಉ. ನಿರ್ದೇಶಕರು ಸಭೆಗಳಿಗೆ ನಿರಂತರವಾಗಿ 3 ಅಥವಾ ಹೆಚ್ಚಿನ ಸಭೆಗಳಿಗೆ ಗೈರು ಹಾಜರಾದಾಗ ಸೂಕ್ತ ಕಾರಣ ಕೇಳಿ ಸೂಚನೆ (ನೋಟಿಸ್) ನೀಡುವುದು. ಆದಾಗ್ಯೂ, ಮುಂದಿನ ಸಭೆಗಳಿಗೆ ಹಾಜರಾಗದಿದ್ದಲ್ಲಿ, ಆಡಳಿತ ಮಂಡಳಿಯ ಸಭೆಯಲ್ಲಿ ವಿಷಯವನ್ನು ಚರ್ಚಿಸಿ, ಅನುಮೋದಿಸಿ ಸೂಕ್ತ ಕಾರಣಗಳೊಂದಿಗೆ ಕಂಪನಿಯ ನಿಬಂಧಕರಿಗೆ ಸಂಬಂಧಪಟ್ಟ ನಮೂನೆಯಲ್ಲಿ ವಿವರಗಳನ್ನು ಸಲ್ಲಿಸಿ ಮಂಡಳಿಯಿಂದ ತೆಗೆದುಹಾಕಲು ಕ್ರಮ ಕೈಗೊಳ್ಳುವುದು.

**23. ಆಡಳಿತ ಮಂಡಳಿಯ ನಿರ್ದೇಶಕರು ಪ್ರತಿ ವರ್ಷ ಕೆ.ವೈ.ಸಿ. ಸಲ್ಲಿಸಬೇಕೆ?**

ಉ. ಹೌದು, ಇದು ನಿರ್ದೇಶಕರ ವೈಯಕ್ತಿಕ ಜವಾಬ್ದಾರಿಯಾಗಿರುತ್ತದೆ.

**24. ಮಾಹಿತಿ ಹಕ್ಕು ಅಧಿನಿಯಮದಡಿ ರೈತ ಉತ್ಪಾದಕ ಸಂಸ್ಥೆ ಒಳಪಟ್ಟಿದೆಯೇ?**

ಉ. ರೈತ ಉತ್ಪಾದಕ ಸಂಸ್ಥೆಯು ಮಾಹಿತಿ ಅಧಿನಿಯಮದಡಿ ಒಳಪಡುವುದಿಲ್ಲ.

**25. ಲೆಕ್ಕ ಪರಿಶೋಧಕರು (ಚಾರ್ಟರ್ಡ್ ಅಕೌಂಟೆಂಟ್) ಮತ್ತು ಕಂಪನಿ ಕಾರ್ಯದರ್ಶಿಗಳಿಬ್ಬರನ್ನು ರೈತ ಉತ್ಪಾದಕ ಸಂಸ್ಥೆಗಳಲ್ಲಿ ನೇಮಕ ಮಾಡಿಕೊಳ್ಳುವ ಅವಶ್ಯಕತೆ ಇದೆಯೇ?**

ಉ. ಲೆಕ್ಕ ಪರಿಶೋಧಕರು ಮತ್ತು ಕಂಪನಿ ಕಾರ್ಯದರ್ಶಿಗಳಿಗೆ ಬೇರೆ ಬೇರೆ ವಿಧದ ಪಾತ್ರ ಮತ್ತು ಜವಾಬ್ದಾರಿ ಇರುವುದರಿಂದ ಇವರನ್ನು ನೇಮಕ ಮಾಡಿಕೊಳ್ಳಬೇಕು. ರೈತ ಉತ್ಪಾದಕ ಕಂಪನಿಯು ನಿರಂತರವಾಗಿ ಮೂರು ವರ್ಷಗಳವರೆಗೆ ತನ್ನ ವ್ಯವಹಾರದಲ್ಲಿ ಐದು ಕೋಟಿ ರೂಪಾಯಿಗಳಿಗಿಂತ ಹೆಚ್ಚು ವ್ಯವಹಾರ ಮಾಡಿದಲ್ಲಿ ಕಂಪನಿ ಕಾರ್ಯದರ್ಶಿಯನ್ನು ಕಡ್ಡಾಯವಾಗಿ ನೇಮಿಸಕೊಳ್ಳಬೇಕು.

**26. ನಿರ್ದೇಶಕ ಮಂಡಳಿ ಸಭೆ ಮತ್ತು ವಾರ್ಷಿಕ ಸಾಮಾನ್ಯ ಸಭೆಯ ಸಂಖ್ಯೆಯನ್ನು ದಾಖಲಿಸಿ ಪುಸ್ತಕದಲ್ಲಿ ನಮೂದಿಸುವುದು ಕಡ್ಡಾಯವೇ?**

ಉ. ಆಡಳಿತ ಮಂಡಳಿಯ ಸಭೆ ಮತ್ತು ವಾರ್ಷಿಕ ಸಾಮಾನ್ಯ ಸಭೆಗಳ ನಡಾವಳಿ ಪುಸ್ತಕಗಳಲ್ಲಿ ಕಡ್ಡಾಯವಾಗಿ ಸಭೆಯ ಸಂಖ್ಯೆ, ದಿನಾಂಕ, ಸದಸ್ಯರ ಹಾಜರಾತಿ ಸಂಖ್ಯೆ ಮತ್ತು ಅನುಕ್ರಮವಾಗಿ ಪುಟಗಳ ಸಂಖ್ಯೆಯನ್ನು ನಮೂದಿಸಬೇಕು ಮತ್ತು ಎಲ್ಲಾ ಪುಟಗಳಲ್ಲಿ ಅಧ್ಯಕ್ಷರು ಸಹಿ ಹಾಕಬೇಕು.

**27. ತಜ್ಞ ನಿರ್ದೇಶಕರು ಚೆಕ್‌ಗೆ ಸಹಿ ಮಾಡುವ ಅಧಿಕಾರ ಹೊಂದಿರುವರೇ?**

ಉ. ಆಡಳಿತ ಮಂಡಳಿಯ ನಿರ್ದೇಶನ ಮತ್ತು ಅನುಮೋದನೆ ಇದ್ದಲ್ಲಿ ತಜ್ಞ ನಿರ್ದೇಶಕರು ಸಹಿ ಮಾಡಬಹುದು.

**28. ಆಡಳಿತ ಮಂಡಳಿಯ ಸಭೆಯಲ್ಲಿ ತೆಗೆದುಕೊಂಡ ತೀರ್ಮಾನಗಳಿಗೆ ಒಬ್ಬ ನಿರ್ದೇಶಕರು ಒಪ್ಪದಿದ್ದಲ್ಲಿ ಏನು ಮಾಡಬಹುದು?**

ಉ. ನಿರ್ದೇಶಕರ ಮಂಡಳಿಯ ಸಭೆಯಲ್ಲಿ ಕಂಪನಿಯ ಅಭಿವೃದ್ಧಿಗಾಗಿ ತೆಗೆದುಕೊಂಡ ತೀರ್ಮಾನಗಳ ಪರವಾಗಿ ಬಹುಮತವಿದ್ದಲ್ಲಿ ಅದನ್ನು ಅಂತಿಮ ತೀರ್ಮಾನವೆಂದು ಪರಿಗಣಿಸುವುದು ಮತ್ತು ಯಾವುದೇ ಒಬ್ಬ ನಿರ್ದೇಶಕರು, ಸಭೆಯಲ್ಲಿ ತೆಗೆದುಕೊಂಡ ತೀರ್ಮಾನಗಳಿಗೆ ವಿರುದ್ಧವಾಗಿದ್ದರೆ, ಆ ತೀರ್ಮಾನಗಳಿಗೆ ಯಾವುದೇ ವ್ಯತಿರಿಕ್ತ ಪರಿಣಾಮ ಬೀರುವುದಿಲ್ಲ ಅಥವಾ ಅಂತಹ ತೀರ್ಮಾನಗಳನ್ನು ಕೈಬಿಡುವ ಅವಶ್ಯಕತೆ ಇರುವುದಿಲ್ಲ.

**29. ಹೊಸ ಆಡಳಿತ ಮಂಡಳಿಯ ನಿರ್ದೇಶಕರ ನೇಮಕಾತಿಯು ಚುನಾವಣಾ ಪ್ರಕ್ರಿಯೆಯ ಮೂಲಕ ಆಗಬೇಕೆ?**

ಉ. ಆಯ್ಕೆಯಲ್ಲಿ ಒಮ್ಮತವಿಲ್ಲದಿದ್ದರೆ ಹಾಗೂ ಹೆಚ್ಚು ಆಕಾಂಕ್ಷಿಗಳು ಇದ್ದ ಸಂದರ್ಭಗಳಲ್ಲಿ ನಿರ್ದೇಶಕರನ್ನು ಚುನಾವಣೆಯ ಮೂಲಕ ಆಯ್ಕೆ ಮಾಡುವುದು.

**ಹೊಸ ನಿರ್ದೇಶಕ ನೇಮಕಾತಿ ಪ್ರಕ್ರಿಯೆ:**

- ಆಕಾಂಕ್ಷಿಗಳಿಂದ ನಿಗಧಿತ ನಮೂನೆಯಲ್ಲಿ ಆಸಕ್ತಿಯ ಅರ್ಜಿಯನ್ನು ಪಡೆಯುವುದು.
- ಆಡಳಿತ ಮಂಡಳಿಯ ಸಭೆಯಲ್ಲಿ ಆಕಾಂಕ್ಷಿಗಳ ಆಸಕ್ತಿಯ ಅರ್ಜಿಗಳ ಬಗ್ಗೆ ಚರ್ಚೆ ಹಾಗೂ ಹೊಸ ನಿರ್ದೇಶಕರ ನೇಮಕಾತಿಯ ಬಗ್ಗೆ ಮಾನದಂಡಗಳನ್ನು ತೀರ್ಮಾನಿಸುವುದು.
- ಸೂಕ್ತ ಅಭ್ಯರ್ಥಿಗಳ ಅನುಮೋದನೆ ಮತ್ತು ಅಂಗೀಕರಿಸುವುದು.
- ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಹೊಸ ನಿರ್ದೇಶಕರ ನೇಮಕಾತಿಯ ವಿಷಯವನ್ನು ಮಂಡಿಸಿ ಸಭೆಯ ಅನುಮೋದನೆ ಪಡೆಯುವುದು.
- ಹೊಸ ನಿರ್ದೇಶಕರ ನೇಮಕಾತಿಯ ವಿವರಗಳನ್ನು ನಿಗಧಿತ ನಮೂನೆಯಲ್ಲಿ ಕಂಪನಿ ನಿಬಂಧಕರಿಗೆ ಸಲ್ಲಿಸಿ (ಡಿಎಸ್‌ಸಿ ಮತ್ತು ಡಿಆಯ್‌ಎನ್) ಅನುಮೋದನೆ ಪಡೆಯುವುದು.

**30. ಕಂಪನಿಯು ಯಾವುದೇ ಲಾಭವನ್ನು ಗಳಿಸದಿದ್ದ ವರ್ಷದಲ್ಲಿ ಮೀಸಲು ಬಂಡವಾಳವನ್ನು ಹೇಗೆ ನಿರ್ವಹಿಸಬೇಕು?**

ಉ. ಕಂಪನಿಯು ಯಾವುದೇ ಲಾಭವನ್ನು ಗಳಿಸದಿದ್ದರೆ, ಕಂಪನಿಯ ಸದಸ್ಯರು ತಮ್ಮ ಪ್ರೋತ್ಸಾಹ ಲಾಭಾಂಶದ ಆಧಾರದ ಮೇಲೆ ಮೀಸಲು ನಿಧಿಗೆ ವಂತಿಗೆ ನೀಡುವುದರ ಮುಖಾಂತರ ಮೀಸಲು ಬಂಡವಾಳವನ್ನು ನಿರ್ವಹಿಸಲಾಗುತ್ತದೆ.

**31. ಆಡಳಿತ ಮಂಡಳಿಯ ನಿರ್ದೇಶಕರು ಎಷ್ಟು ಬಾರಿ ನೇಮಕವಾಗಬಹುದು?**

ಉ. ಕಂಪನಿಗಳ ಕಾಯ್ದೆಯ ಅಡಿಯಲ್ಲಿ ಒಬ್ಬ ನಿರ್ದೇಶಕರು ಮರು ಆಯ್ಕೆ ಆಗುವುದಕ್ಕೆ ಅವಕಾಶವಿದೆ. ಆದರೆ, ಎಷ್ಟು ಬಾರಿ ನೇಮಕವಾಗಬೇಕು ಎಂಬುದಕ್ಕೆ ನಿರ್ಬಂಧವಿಲ್ಲ. ಆದಾಗ್ಯೂ, ಕಂಪನಿಯು ತನ್ನ ನಿಯಮಾವಳಿಗಳಲ್ಲಿ ಯಾವುದಾದರು ನಿರ್ಬಂಧಗಳನ್ನು ವಿಧಿಸಿದ್ದರೆ ಅದರ ಅನುಸಾರ ಎಷ್ಟು ಸಾರಿ ಮರುನೇಮಕಾತಿ ಮಾಡಬೇಕೆನ್ನುವುದನ್ನು ತಿಳಿದು ನಿರ್ವಹಿಸುವುದು ಸೂಕ್ತವಾಗಿರುತ್ತದೆ.

**32. ಸಹಕಾರಿ ಸಂಘದ ಪದಾಧಿಕಾರಿಗಳು ರೈತ ಉತ್ಪಾದಕ ಸಂಸ್ಥೆಯ ಆಡಳಿತ ಮಂಡಳಿಯ ನಿರ್ದೇಶಕರಾಗಬಹುದೆ?**

ಉ. ಸಹಕಾರಿ ಸಂಘದ ಪದಾಧಿಕಾರಿಗಳು ಅಥವಾ ಇತರೆ ಸಂಸ್ಥೆಗಳು, ಕಂಪನಿಗಳ ಪದಾಧಿಕಾರಿಗಳು ರೈತ ಉತ್ಪಾದಕ ಸಂಸ್ಥೆಯ ಆಡಳಿತ ಮಂಡಳಿಯ ನಿರ್ದೇಶಕರಾಗಬೇಕಾದರೆ, ಮೊದಲಿಗೆ ಅವರು ಪ್ರಾಥಮಿಕ ಉತ್ಪಾದಕರಾಗಿರಬೇಕು, ರೈತ ಉತ್ಪಾದಕ ಸಂಸ್ಥೆಯ ಷೇರುದಾರರಾಗಿರಬೇಕು, ಜೊತೆಗೆ ನಿರ್ದೇಶಕರಾಗಲು ಬಯಸಿದ್ದಲ್ಲಿ ತಮ್ಮ ಅರ್ಜಿಯ ಜೊತೆ ಅವರು ಇತರೆ ಸಂಸ್ಥೆಗಳಲ್ಲಿ ಹೊಂದಿರುವ ಹುದ್ದೆಗಳು, ಪಾಲುದಾರಿಕೆ, ಜವಾಬ್ದಾರಿಗಳ ಮತ್ತು ವೈಯಕ್ತಿಕ ವ್ಯವಹಾರವಿದ್ದಲ್ಲಿ ಇವೆಲ್ಲವನ್ನು ರೈತ ಉತ್ಪಾದಕ ಸಂಸ್ಥೆಗೆ ಸಲ್ಲಿಸಬೇಕಾಗುತ್ತದೆ. ಈ ವಿಷಯಗಳನ್ನು ಹಾಗೂ ಅವರ ಆಸಕ್ತಿಗಳನ್ನು ಆಡಳಿತ ಮಂಡಳಿಯಲ್ಲಿ ಚರ್ಚಿಸಿ ರೈತ ಉತ್ಪಾದಕ ಕಂಪನಿಯ ವ್ಯವಹಾರ ಹಾಗೂ ಅಭಿವೃದ್ಧಿಗೆ ಇವರ ಸೇವೆ ಪೂರಕವಾಗಬಹುದೆಂಬುದಾದರೆ ಇವರನ್ನು ನಿರ್ದೇಶಕರ ನೇಮಕಾತಿಗೆ ಶಿಫಾರಸ್ಸು ಮಾಡಿ ಸಾಮಾನ್ಯ ಸಭೆಯ ಅನುಮೋದನೆಗೆ ಕಳಿಸುವುದು ಹಾಗೂ ಅಂತಿಮವಾಗಿ ಸಾಮಾನ್ಯ ಸಭೆಯಲ್ಲಿ ಇವರ ನೇಮಕಾತಿಯನ್ನು ಅನುಮೋದನೆ ಮತ್ತು ಅಂಗೀಕರಿಸುವುದರ ಮೂಲಕ ಇಂತಹ ವ್ಯಕ್ತಿಗಳನ್ನು ನಿರ್ದೇಶಕರಾಗಿ ನೇಮಿಸಬಹುದು.

**33. ವಾರ್ಷಿಕ ಸಾಮಾನ್ಯ ಸಭೆ (ಎಜಿಎಮ್) ಯಲ್ಲಿ ಕನಿಷ್ಠ ಹಾಜರಾತಿ (ಕೋರಮ್) ಇಲ್ಲದಿದ್ದರೆ ಏನಾಗುತ್ತದೆ?**

ಉ. ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಕನಿಷ್ಠ ಹಾಜರಾತಿ ಇಲ್ಲದಿದ್ದರೆ, ಸಭೆಯನ್ನು ಮುಂದಿನವಾರ ಅದೇ ದಿನ, ಅದೇ ಸ್ಥಳ ಮತ್ತು

ಅದೇ ಸಮಯಕ್ಕೆ ಮುಂದೂಡಲಾಗುತ್ತದೆ. ಒಂದು ವೇಳೆ ನಂತರದ ಸಭೆಯಲ್ಲಿಯೂ ನಿಗದಿತ ಸಮಯಕ್ಕೆ 30 ನಿಮಿಷಗಳವರೆಗೆ ಮುಂದೂಡಿಯೂ ಕನಿಷ್ಠ ಹಾಜರಾತಿ ಇಲ್ಲದಿದ್ದರೆ ಸಭೆಯನ್ನು ಹಾಜರಿರುವ ಸದಸ್ಯರೊಂದಿಗೆ ನಡೆಸಬಹುದು.

**34. ಒಂದು ವೇಳೆ ಮಂಡಳಿಯು ತೆಗೆದುಕೊಳ್ಳುವ ಯಾವುದೇ ನಿರ್ಧಾರವು ಕಂಪನಿಗೆ ನಷ್ಟವನ್ನುಂಟು ಮಾಡಿದರೆ, ಆ ನಿರ್ಧಾರವನ್ನು ಬೆಂಬಲಿಸಿದ ನಿರ್ದೇಶಕರುಗಳು ಮಾತ್ರ ಹೊಣೆಗಾರರೋ ಅಥವಾ ಎಲ್ಲಾ ನಿರ್ದೇಶಕರು ಹೊಣೆಗಾರರಾಗುತ್ತಾರೆಯೋ**

ಉ. ಆಡಳಿತ ಮಂಡಳಿಯು ಕಂಪನಿಯ ಅಭಿವೃದ್ಧಿಗಾಗಿ ಸಭೆಗಳಲ್ಲಿ ಬಹುಮತದಿಂದ ತೆಗೆದುಕೊಂಡ ನಿರ್ಣಯಗಳಿಂದ, ಕಂಪನಿಗೆ ಮುಂದಿನ ದಿನಗಳಲ್ಲಿ ಯಾವುದೇ ವ್ಯವಹಾರದಲ್ಲಿ ನಷ್ಟವಾದಲ್ಲಿ, ವೈಯಕ್ತಿವಾಗಿ ಯಾವುದೇ ನಿರ್ದೇಶಕರು ಹೊಣೆಗಾರರಾಗಿರುವುದಿಲ್ಲ, ಆದರೆ ಕಂಪನಿಯು ವ್ಯವಹಾರದ ಸಂದರ್ಭದಲ್ಲಿ ಮಾಡಿಕೊಂಡ ಕರಾರು ಒಪ್ಪಂದದ ಪ್ರಕಾರ, ಕಂಪನಿಯು ನಷ್ಟಗಳನ್ನು ಕಂಪನಿಯ ಬಂಡವಾಳ ಮತ್ತು ಕಂಪನಿಯ ಚಿರಾಸ್ತಿಗಳ ಮೂಲಕ ಭರಿಸಬೇಕಾಗುತ್ತದೆ.

**35. ರೈತರು ತಮ್ಮ ಉತ್ಪನ್ನಗಳನ್ನು ಮಾರುಕಟ್ಟೆಯಲ್ಲಿ ಮಾರಾಟ ಮಾಡುವಾಗ ತಮ್ಮ ವಹಿವಾಟಿಗೆ ನಗದು ಪಾವತಿಗಳನ್ನು ಪಡೆಯುತ್ತಾರೆ, ಅದೇ ರೀತಿ ಅವರು ರೈತ ಉತ್ಪಾದಕ ಸಂಸ್ಥೆಗೆ ಮಾರಾಟ ಮಾಡುವಾಗ ನಗದು ವಹಿವಾಟುಗಳನ್ನು ಮಾಡಬಹುದೆ?**

ಉ. ರೈತ ಉತ್ಪಾದಕ ಸಂಸ್ಥೆಯ ನೀತಿ ನಿಯಮಾವಳಿಯಲ್ಲಿ ತಿಳಿಸಿರುವಂತೆ ಹಾಗೂ ಕಂಪನಿಯ ಲೆಕ್ಕ ಪರಿಶೋಧಕರ ಸಲಹೆಯಂತೆ ರೈತರಿಂದ ಉತ್ಪನ್ನಗಳನ್ನು ಖರೀದಿಸುವಾಗ ನಗದು ವಹಿವಾಟುಗಳನ್ನು ಮಾಡಬಹುದು. ಆದಾಗ್ಯೂ ನಗದು ವಹಿವಾಟಿನ ಮಿತಿಯನ್ನು ಆಡಳಿತ ಮಂಡಳಿಯ ಸಭೆಯಲ್ಲಿ ನಿರ್ಧರಿಸಿ ಅದನ್ನು ಕಂಪನಿಯೊಂದಿಗೆ ವ್ಯವಹರಿಸಬಹುದು. ರೈತರು ಅಥವಾ ವ್ಯವಹಾರದಲ್ಲಿ ಬರುವ ಎಲ್ಲಾ ಭಾಗಿದಾರರಿಗೆ ನಗದು ವ್ಯವಹಾರದ ಮಿತಿಯನ್ನು ಮೊದಲೇ ತಿಳಿಸುವುದು ಸೂಕ್ತ. ಹೆಚ್ಚಿನ ಸಂದರ್ಭಗಳಲ್ಲಿ ರೈತರಿಗೆ ಮತ್ತು ಇತರೆ ಭಾಗಿದಾರರೊಂದಿಗೆ ವ್ಯವಹರಿಸುವಾಗ ನಗದು ವ್ಯವಹಾರವನ್ನು ಆದಷ್ಟು ಕಡಿತಗೊಳಿಸಿ ಚೆಕ್, ಆರ್‌ಟಿಜಿಎಸ್, ಎನ್‌ಇಎಫ್‌ಟಿ ಅಥವಾ ಅಂತರ್ಜಾಲದ ಮುಖಾಂತರ ಹಣಕಾಸಿನ ವ್ಯವಹಾರವನ್ನು ನಿರ್ವಹಿಸುವುದು, ಕಂಪನಿಗಳ ಶ್ರೇಷ್ಠತೆ ಮತ್ತು ಪಾರದರ್ಶಕತೆಯನ್ನು ಬಿಂಬಿಸುತ್ತದೆ.

**36. ವ್ಯವಹಾರ ಬಂಡವಾಳವನ್ನು ಉತ್ಪನ್ನಗಳ ವ್ಯಾಪಾರಕ್ಕಾಗಿ ಬಳಸಬಹುದೇ?**

ಉ. ಹೌದು, ಆದರೆ ವ್ಯವಹಾರ ಬಂಡವಾಳದ ನೆರವು ನೀಡುವ ಪ್ರಾಧಿಕಾರವು / ಇಲಾಖೆ ವಿಧಿಸಿರುವ ನಿರ್ಬಂಧಗಳನ್ನು ಪಾಲಿಸಲೇಬೇಕಾಗುತ್ತದೆ.

**37. ಕಂಪನಿಯ ಸ್ಥಳವನ್ನೇನಾದರು ಬದಲಾಯಿಸಿದರೆ, ಅದನ್ನು ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಅನುಮೋದಿಸಬೇಕೆ?**

ಉ. ಕಂಪನಿಯ ನೊಂದಾಯಿತ ಕಛೇರಿ ಸ್ಥಳವನ್ನು ಬದಲಾಯಿಸಲು ಆಡಳಿತ ಮಂಡಳಿಯ ಅನುಮೋದನೆ ಸಾಕಾಗುತ್ತದೆ. ಆದರೆ, ಸಾಮಾನ್ಯ ಸಭೆಯಲ್ಲಿ ಇದನ್ನು ಎಲ್ಲರಿಗೂ ತಿಳಿಸಬೇಕಾಗುತ್ತದೆ ಮತ್ತು ನಿಗದಿತ ನಮೂನೆಯಲ್ಲಿ ಕಛೇರಿ ಬದಲಾಯಿಸಿದ ವಿವರಗಳನ್ನು ಕಂಪನಿ ನಿಬಂಧಕರಿಗೆ ಸಲ್ಲಿಸುವುದು ಕಡ್ಡಾಯವಾಗಿರುತ್ತದೆ.

**38. ವಾರ್ಷಿಕ ಸಾಮಾನ್ಯ ಸಭೆಯಲ್ಲಿ ರೈತ ಉತ್ಪಾದಕ ಸಂಸ್ಥೆಯ ಸದಸ್ಯರ ನಡವಳಿಕೆ ಅಶಿಸ್ತಿನದಾಗಿದ್ದು ಮತ್ತು ಅವರು ಅವಾಚ್ಯ ಶಬ್ಧಗಳನ್ನು ಬಳಸಿದಲ್ಲಿ, ಅವರನ್ನು ಅನರ್ಹಗೊಳಿಸಬಹುದೆ?**

ಉ. ಅಂತಹವರ ಅನರ್ಹತೆಗಾಗಿ ಕಾಯ್ದೆಯಲ್ಲಿ ಯಾವುದೇ ನಿಬಂಧನೆಗಳು ಸಧ್ಯಕ್ಕೆ ಲಭ್ಯವಿರುವುದಿಲ್ಲ. ಆದಾಗ್ಯೂ, ಅವರನ್ನು ಸಭೆಯಿಂದ ಹೊರಗೆ ಕಳುಹಿಸಬಹುದು ಮತ್ತು ಹತ್ತಿರದ ಪೋಲಿಸ್ ಠಾಣೆಯಲ್ಲಿ ದೂರನ್ನು ಸಲ್ಲಿಸಬಹುದಾಗಿದೆ.

**39. ಕಂಪನಿಯ ನಿಯಮಾವಳಿಗಳನ್ನು ಪಾಲಿಸದೆ ಇರುವ ಆಡಳಿತ ಮಂಡಳಿಯ ನಿರ್ದೇಶಕರನ್ನು, ನಿರ್ದೇಶಕರ ಹುದ್ದೆಯಿಂದ ತೆಗೆದು ಹಾಕುವ ವಿಧಾನವೇನು?**

ಉ. ಕಂಪನಿ ಕಾಯ್ದೆಯನ್ನು ಪಾಲಿಸದೆ ಇರುವ ಹಾಗೂ ಸತತವಾಗಿ ಸಭೆಗಳಿಗೆ ಹಾಜರಾಗದ ಆಡಳಿತ ಮಂಡಳಿಯ ನಿರ್ದೇಶಕರನ್ನು, ನಿರ್ದೇಶಕರ ಹುದ್ದೆಯಿಂದ ಸೂಕ್ತ ಕಾರಣಗಳನ್ನು ನೀಡಿ ಆಡಳಿತ ಮಂಡಳಿಯಲ್ಲಿ ಚರ್ಚಿಸಿ ಮತ್ತು ಅಂತಿಮ ತೀರ್ಮಾನವನ್ನು ಸಾಮಾನ್ಯ ಸಭೆಯಲ್ಲಿ ಮಂಡಿಸುವುದು. ಆ ಸಂದರ್ಭದಲ್ಲಿ ಹೊರಹಾಕಲು ಸೂಚಿಸಿರುವ ನಿರ್ದೇಶಕರಿಗೆ ಹೇಳಿಕೆ ನೀಡಲು ಅವಕಾಶ ಕಲ್ಪಿಸಿಕೊಡಬೇಕು ಮತ್ತು ಇದಕ್ಕೆ ಸಂಬಂದಪಟ್ಟಂತೆ ಹೊರಹಾಕಲು ಸೂಚಿಸಿರುವ ನಿರ್ದೇಶಕರಿಗೆ ಸೂಚನೆಯನ್ನು ಲಿಖಿತರೂಪದಲ್ಲಿ ನೀಡಿರಬೇಕು ಹಾಗೂ ಸಂಬಂಧಪಟ್ಟ ಎಲ್ಲಾ ದಾಖಲಾತಿಯನ್ನು ಸಾಮಾನ್ಯ ಸಭೆಗೆ ಒದಗಿಸಿರಬೇಕು.

**40. ಸಹಕಾರ ಸಂಸ್ಥೆ ಮತ್ತು ರೈತ ಉತ್ಪಾದಕ ಸಂಸ್ಥೆಗೆ ಇರುವ ವ್ಯತ್ಯಾಸಗಳೇನು?**

**ಉ.** ಸಹಕಾರ ಸಂಸ್ಥೆ ಮತ್ತು ರೈತ ಉತ್ಪಾದಕರ ಕಂಪನಿಯ ನಡುವಿನ ವ್ಯತ್ಯಾಸಗಳು

| ವಿಷಯ | ಸಹಕಾರ ಸಂಸ್ಥೆ | ರೈತ ಉತ್ಪಾದಕರ ಕಂಪನಿ |
|---|---|---|
| ನೋಂದಣಿ | ಸಹಕಾರ ಸಂಘಗಳ ಕಾಯ್ದೆಯಡಿಯಲ್ಲಿ | ಕಂಪನಿಗಳ ಕಾಯ್ದೆ 1956/2013ರ ಅಡಿಯಲ್ಲಿ |
| ಉದ್ದೇಶಗಳು | ಸೀಮಿತ ಉದ್ದೇಶಗಳಿಗೆ ಮತ್ತು ಸದಸ್ಯರ ಸೇವೆಗಳಿಗೆ ಸೀಮಿತ | ಹೆಚ್ಚಿನ ಉದ್ದೇಶಗಳಿಗಾಗಿ, ಪ್ರಾಥಮಿಕ ಸದಸ್ಯರ ಅಭಿವೃದ್ಧಿಗಾಗಿ ಮತ್ತು ವ್ಯವಹಾರದ ಮುಖಾಂತರ ಲಾಭಗಳಿಸುವ ಉದ್ದೇಶ |
| ಸದಸ್ಯತ್ವ | ವ್ಯಕ್ತಿಗಳು ಮತ್ತು ಸಹಕಾರ ಸಂಸ್ಥೆಗಳಿಗೆ ಮಾತ್ರ | ಪ್ರಾಥಮಿಕ ಉತ್ಪಾದಕರಿಗೆ ಮಾತ್ರ ಮತ್ತು ಉತ್ಪಾದಕ ಕಂಪನಿಗಳು ಸದಸ್ಯರಾಗಬಹುದು |
| ಮಂಡಳಿಯಲ್ಲಿ ವೃತ್ತಿಪರತೆ / ವಿಷಯ ತಜ್ಞರು | ಅವಕಾಶವಿಲ್ಲ | ವ್ಯವಹಾರಕ್ಕೆ ತಕ್ಕಂತೆ ವೃತ್ತಿಪರತೆ / ವಿಷಯ ತಜ್ಞರನ್ನು ನೇಮಿಸಿಕೊಳ್ಳಬಹುದು (1/5 ರಷ್ಟು) |
| ವ್ಯವಹಾರದ ವ್ಯಾಪ್ತಿ | ಸೀಮಿತ | ದೇಶದ ಯಾವುದೇ ಭಾಗದಲ್ಲಿ ವ್ಯವಹಾರ ಮಾಡಬಹುದು |
| ಷೇರುಗಳ ಮಾರಾಟ/ ವರ್ಗಾವಣೆ | ಷೇರುಗಳ ಮಾರಾಟ ಮತ್ತು ವರ್ಗಾವಣೆಗೆ ಅವಕಾಶವಿಲ್ಲ | ಮಾರಾಟ ಮಾಡಲು ಅವಕಾಶವಿಲ್ಲ ಆದರೆ ವರ್ಗಾವಣೆ ಮಾಡಬಹುದು (ಪ್ರಾಥಮಿಕ ಉತ್ಪಾದಕರಿಗೆ ಮಾತ್ರ) |
| ಮೀಸಲು ಬಂಡವಾಳ | ಲಾಭವಿದ್ದಲ್ಲಿ ಮೀಸಲು ಬಂಡವಾಳವನ್ನು ನಿರ್ವಹಿಸಬಹುದು | ಲಾಭವಿರಲಿ ಅಥವಾ ಇಲ್ಲದಿರಲಿ ಮೀಸಲು ಬಂಡವಾಳವನ್ನು ಕಡ್ಡಾಯವಾಗಿ ನಿರ್ವಹಿಸಬೇಕು |
| ಮತದಾನದ ಹಕ್ಕುಗಳು | ಒಬ್ಬ ವ್ಯಕ್ತಿ ಒಂದು ಮತ ಆದರೆ ಸರ್ಕಾರಕ್ಕೆ ವಿಟೋ ಅಧಿಕಾರವಿರುತ್ತದೆ (ತೀರ್ಮಾನಗಳನ್ನು ಒಪ್ಪುವುದು/ ತಿರಸ್ಕರಿಸುವ ಅಧಿಕಾರ) | ಒಬ್ಬ ಸದಸ್ಯ, ಒಂದು ಮತ |
| ಲಾಭಾಂಶ ಹಂಚಿಕೆ | ಷೇರು ಹೂಡಿಕೆಯ ಮೇಲೆ ಸೀಮಿತ ಲಾಭ | ಸಾಮಾನ್ಯ ಲಾಭಾಂಶ ಮತ್ತು ವ್ಯವಹಾರ ಪ್ರೋತ್ಸಾಹಿತ ಲಾಭಾಂಶ |
| ಸರ್ಕಾರದ ಪಾತ್ರ | ಸೀಮಿತ | ಕಾನೂನಾತ್ಮಕ ಅನುಸರಣೆಗಳಿಗೆ ಸೀಮಿತವಾಗಿರುತ್ತದೆ |
| ವ್ಯಾಜ್ಯಗಳ ಬಗೆಹರಿಸುವಿಕೆ | ಸಹಕಾರ ತತ್ವದ ಆಧಾರದ ಮೇಲೆ | ಮಧ್ಯಸ್ಥಿಕೆ / ಸಂಧಾನದ ಮುಖಾಂತರ |
| ಕಂಪನಿಯ ಮಾಲೀಕತ್ವದಲ್ಲಿ ಬಂಡವಾಳ ಹೂಡಿಕೆ | ಅವಕಾಶವಿಲ್ಲ | ಕಂಪನಿಯ ಮಾಲೀಕತ್ವದಲ್ಲಿ ಹೊರಗಿನವರಿಗೆ ಬಂಡವಾಳ ಹೂಡಿಕೆಗೆ ಅವಕಾಶವಿಲ್ಲ, ಆದರೆ ಸೀಮಿತ ವ್ಯವಹಾರದಲ್ಲಿ ಬಂಡವಾಳ ಹೂಡಿಕೆಗೆ ಅವಕಾಶವಿದೆ |
| ಸಾಲ ಪಡೆಯುವ ಸಾಮರ್ಥ್ಯ | ಬಹಳ ಸೀಮಿತ | ಮುಕ್ತ ಮತ್ತು ಹೆಚ್ಚಿನ ಅವಕಾಶಗಳು |

**41. ವಾರ್ಷಿಕ ಸಾಮಾನ್ಯ ಸಭೆ ಮತ್ತು ಆಡಳಿತ ಮಂಡಳಿಯ ಸಭೆಗಳಿಗೆ ನೀಡುವ ಸೂಚನೆಯೊಂದಿಗೆ ಲಗತ್ತಿಸಬೇಕಾಗಿರುವ ದಾಖಲಾತಿಗಳು ಯಾವುವು?**

| ಕ್ರ.ಸಂ. | ವಾರ್ಷಿಕ ಸಾಮಾನ್ಯ ಸಭೆ (ಎಜಿಎಮ್) | ಆಡಳಿತ ಮಂಡಳಿಯ ಸಭೆ |
|---|---|---|
| 1 | ಸಭೆಯ ಸೂಚನೆ 14 ದಿನ ಮುಂಚಿತವಾಗಿ | ಸಭೆಯ ಸೂಚನೆ – 7 ದಿನ ಮುಂಚೆ |
| 2 | ಚರ್ಚಾ ವಿಷಯಗಳ ಪಟ್ಟಿ | ಚರ್ಚಾ ವಿಷಯಗಳ ಪಟ್ಟಿ |
| 3 | ಸಂಕ್ಷಿಪ್ತ ಹಣಕಾಸು ವರದಿ (ಲೆಕ್ಕಪರಿಶೋಧಕರ ವರದಿ, ಲಾಭ ಮತ್ತು ನಷ್ಟಗಳ ವರದಿ, ಸಾಲಗಳ ವರದಿ, ಇತ್ಯಾದಿ) | ತ್ರೈಮಾಸಿಕ ವರದಿ ಮತ್ತು ಮುಂದಿನ ಯೋಜನೆಗಳು |
| 4 | ಹೊಸ ನಿರ್ದೇಶಕರ ನೇಮಕಾತಿಯ ಪಟ್ಟಿ | ಹಿಂದಿನ ಸಭೆಯ ನಡಾವಳಿಗಳು, ತೀರ್ಮಾನಗಳು ಮತ್ತು ಕೈಗೊಂಡ ಕ್ರಮಗಳ ಬಗ್ಗೆ |
| 5 | ತೆಗೆದು ಹಾಕಲು ಸೂಚಿಸಿರುವ ನಿರ್ದೇಶಕರ ಪಟ್ಟಿ | – |
| 6 | ನಿರ್ದೇಶಕರ ವರದಿ | – |
| 7 | ಬಂಡವಾಳ ಹೂಡಿಕೆ, ವ್ಯವಹಾರ ವಿಸ್ತರಣೆ ಮತ್ತು ಮುಂದಿನ ವಾರ್ಷಿಕ ಯೋಜನೆ ವಿವರಣಾ ಪಟ್ಟಿ | – |
| 8 | ನಿಯಮಾವಳಿಗೆ ತಿದ್ದುಪಡಿ ತರಲು ಕರಡು ವರದಿ | – |

**42. ವಾರ್ಷಿಕ ಸಾಮಾನ್ಯ ಸಭೆ ಮತ್ತು ಆಡಳಿತ ಮಂಡಳಿಯ ಸಭೆಯನ್ನು ಕರೆಯುವ ಜವಾಬ್ದಾರಿ ಯಾರಿಗೆ ಇರುತ್ತದೆ?**

ಉ. ವಾರ್ಷಿಕ ಸಾಮಾನ್ಯ ಸಭೆಯನ್ನು ಕರೆಯುವ ಬಗ್ಗೆ ಆಡಳಿತ ಮಂಡಳಿಯ ಸಭೆಯಲ್ಲಿ ಚರ್ಚಿಸಿ ತೀರ್ಮಾನಿಸಿದಂತೆ ಮತ್ತು ಆಡಳಿತ ಮಂಡಳಿಯ ನಿರ್ದೇಶನದಂತೆ ಕಂಪನಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಮತ್ತು ಸಿಬ್ಬಂದಿ ಈ ಸಭೆಯನ್ನು ನಡೆಸಲು ಸಿದ್ಧತೆ ಮತ್ತು ಸಭೆ ಕರೆಯುವ ಸುತ್ತೋಲೆಯನ್ನು ಹೊರಡಿಸಿ ಸಭೆಯನ್ನು ಕರೆಯುತ್ತಾರೆ. ಆಡಳಿತ ಮಂಡಳಿಯ ಸಭೆಯನ್ನು ಕರೆಯುವುದು ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಜವಾಬ್ದಾರಿಯಾಗಿರುತ್ತದೆ. ಇಲ್ಲದಿದ್ದಲ್ಲಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ರೂ. 1,000/– ದಂಡ ವಿಧಿಸಲು ಕಂಪನಿ ಕಾಯ್ದೆಯಡಿಯಲ್ಲಿ ಅವಕಾಶವಿದೆ.

**43. ರೈತ ಉತ್ಪಾದಕ ಕಂಪನಿಯಲ್ಲಿ ನಿರ್ವಹಿಸಬೇಕಾದ ಕಾನೂನುಬದ್ಧ ದಾಖಲಾತಿಗಳು ಯಾವುವು?**

ಉ. ಕಂಪನಿಯು ಕೆಳಗಿನ ದಾಖಲಾತಿ / ಪುಸ್ತಕ / ಕಡತಗಳನ್ನು ಕಡ್ಡಾಯವಾಗಿ ನಿರ್ವಹಿಸಬೇಕಾಗುತ್ತದೆ

- ನಿರ್ದೇಶಕರ ದಾಖಲಾತಿ / ಕೆ.ವೈ.ಸಿ ಪುಸ್ತಕ
- ನಿರ್ದೇಶಕರ ಷೇರು ಬಂಡವಾಳಗಳ ವಿವರದ ಪುಸ್ತಕ / ದಾಖಲಾತಿ ಪುಸ್ತಕ
- ಸದಸ್ಯರ/ ಷೇರುದಾರರ ಪುಸ್ತಕ
- ಗುತ್ತಿಗೆದಾರರ ದಾಖಲಾತಿ ಪುಸ್ತಕ
- ಆಸ್ತಿ ವಿವರ
- ಆಡಳಿತ ಮಂಡಳಿಯ ಸಭೆಯ ನಡಾವಳಿ ಪುಸ್ತಕ
- ಸಾಮಾನ್ಯ ಸಭೆಯ ನಡಾವಳಿ ಪುಸ್ತಕ
- ನಿಯಮಾವಳಿಗಳ ಜ್ಞಾಪನಾ ಪತ್ರ (ಎಂಓಎ) ಮತ್ತು ಸಂಸ್ಥೆಯ ನಿಯಮಾವಳಿಗಳು (ಎಓಎ)
- ಪ್ರತಿ ವರ್ಷದ ಆದಾಯ ತೆರಿಗೆಗೆ ಸಂಬಂಧಿಸಿದ ಅನುಬಂಧಗಳು
- ಘೋಷಿಸಲ್ಪಟ್ಟ ಬೋನಸ್ ಮತ್ತು ಉಳಿದ ಮೊತ್ತ
- ಲೆಕ್ಕ ಪತ್ರಗಳಿಗೆ ಸಂಬಂಧಿಸಿದ ದಾಖಲಾತಿಗಳು, ಲೆಕ್ಕ ಪರಿಶೋಧಕರು ವಿವರಿಸಿದಂತೆ
- ಸಾಲ ಹಾಗೂ ಹೂಡಿಕೆ ದಾಖಲಾತಿಗಳು
- ಷೇರು ಪ್ರತಿಗಳ ನಕಲು ಪ್ರತಿಗಳು
- ವಾರ್ಷಿಕವಾರು ಲೆಕ್ಕ ಪರಿಶೋಧಕರ ವರದಿಗಳು ಮತ್ತು ಆಂತರಿಕ ಲೆಕ್ಕ ಪರಿಶೋಧಕರ ವರದಿಗಳು
- ಸಿಬ್ಬಂದಿ ದಾಖಲಾತಿಗಳ ಮಾಹಿತಿ ಪುಸ್ತಕ
- ಸಂದರ್ಶಕರ ಪುಸ್ತಕ
- ಕಾಲಕಾಲಕ್ಕೆ ಅನುಸರಿಸಲಾದ ಕಾನೂನು ಅನುಸರಣೆಗಳ ದಾಖಲಾತಿಗಳು
- ಅಧಿಕಾರ/ ಜವಾಬ್ದಾರಿಗಳ ಹಂಚಿಕೆಯ ಪುಸ್ತಕ
- ಇತರೆ

**44. ಷೇರು ಪತ್ರಗಳನ್ನು ಯಾವಾಗ ವಿತರಣೆ ಮಾಡಬೇಕು?**

ಉ. ಷೇರು ಹಣವನ್ನು ಅಧಿಕೃತವಾಗಿ ಸಂಗ್ರಹಿಸಿದ ದಿನದಂದು ಷೇರುದಾರರಿಗೆ ರಸೀದಿಯನ್ನು ನೀಡುವುದು ಮತ್ತು ಷೇರು ಹಣವನ್ನು ಸಂಗ್ರಹಿಸಿದ ದಿನಾಂಕದಿಂದ 90 ದಿನಗಳೊಳಗೆ ಷೇರು ಪತ್ರವನ್ನು ವಿತರಿಸಬೇಕು. ಷೇರುದಾರರು ಕಡ್ಡಾಯವಾಗಿ ನಾಮ ನಿರ್ದೇಶಿಸಿದ ವ್ಯಕ್ತಿಯನ್ನು ತಮ್ಮ ವಾರಸುದಾರರಾಗಿ ನೇಮಿಸಿ ವಿವರಗಳನ್ನು ತಪ್ಪದೇ ಕಂಪನಿಗೆ ಸಲ್ಲಿಸಬೇಕು.

**45. ನಿರ್ದೇಶಕರ ಡಿಎಸ್‌ಸಿ ಮತ್ತು ಡಿಆಯ್‌ಎನ್‌ಗಳು ಎಷ್ಟು ವರ್ಷಗಳ ಕಾಲ ಚಾಲ್ತಿಯಲ್ಲಿ ಇರುತ್ತವೆ?**

ಉ. ಡಿಎಸ್‌ಸಿ 2 ವರ್ಷಗಳ ಕಾಲ ಚಾಲ್ತಿಯಲ್ಲಿರುತ್ತದೆ, ನಂತರ ಪ್ರತಿ 2 ವರ್ಷಗಳಿಗೊಮ್ಮೆ ನವೀಕರಿಸಬೇಕು.
ಡಿಆಯ್‌ಎನ್ ಪಡೆದ ದಿನಾಂಕದಿಂದ 1 ವರ್ಷದವರೆಗೆ ಚಾಲ್ತಿಯಲ್ಲಿರುತ್ತದೆ ನಂತರ ಪ್ರತಿ ವರ್ಷವು ನವೀಕರಿಸಬೇಕು.

**46. ಷೇರುದಾರರಿಗೆ ಷೇರು ಮೊತ್ತವನ್ನು ಹಿಂದಿರುಗಿಸಲು ಅವಕಾಶವಿದೆಯೆ?**

ಉ. ಕಂಪನಿ ಕಾಯ್ದೆ ಪ್ರಕಾರ ಷೇರು ಮೊತ್ತವನ್ನು ಷೇರುದಾರರಿಗೆ ಹಿಂದಿರುಗಿಸಲು ಅವಕಾಶವಿಲ್ಲ. ಆದರೆ, ಷೇರುಗಳನ್ನು ಮತ್ತೊಬ್ಬ ಸದಸ್ಯರಿಗೆ ವರ್ಗಾಯಿಸಲು ಅವಕಾಶವಿದೆ. ಹೊಸ ಸದಸ್ಯರಾದಲ್ಲಿ ಅವರು ಕಡ್ಡಾಯವಾಗಿ ಉತ್ಪಾದಕರಾಗಿರಬೇಕು.

---

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: ನಿರ್ದೇಶಕರು, ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರ
ತೋಟಗಾರಿಕೆ ಮಹಾವಿದ್ಯಾಲಯ ಸಂಕೀರ್ಣ, ತೋ.ವಿ.ವಿ. ಆವರಣ, ಜಿಕೆವಿಕೆ ಅಂಚೆ, ಬೆಂಗಳೂರು – 560 065